20. ಪೋಷಕ ಸಮಿತಿ ರಚನೆಯಾದ ನಂತರ ಶಿಕ್ಷಣದ ಗುಣಮಟ್ಟವು ಸುಧಾರಣೆಯಾಗಿರುವುದು ಹಾಗೂ ಶಾಲೆಯು ಸಂಬಂಧಿಸಿದ ಅನುದಾನದ ಖರ್ಚಿನ ಬಗ್ಗೆ ಪಾರದರ್ಶಕತೆಯು ಕಂಡುಬಂದಿರುವುದು ಮುಖ್ಯ ಅಂಶವಾಗಿದೆ.

21. ಪೋಷಕ ಸಮಿತಿಯಿಂದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟದಲ್ಲಿ ಸುಧಾರಣೆಯಾಗಿರುವ ಬಗ್ಗೆ ಔಪಚಾರಿಕವಾಗಿ ಯಾವುದೇ ಮೌಲ್ಯಮಾಪನವನ್ನು ಮಾಡಿರುವುದಿಲ್ಲ.

ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಯೋಗ ಮತ್ತು ನೈತಿಕ ಶಿಕ್ಷಣವನ್ನು ಕಡ್ಡಾಯ ಗೊಳಿಸುವುದು

322 (539) ಶ್ರೀ ಸಭಾಪತಿ ಯು.ಆರ್. (ಉಡುಪಿ) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಯೋಗ ಮತ್ತು ನೈತಿಕ ಶಿಕ್ಷಣವನ್ನು 2003-2004 ರಿಂದ ಕಡ್ಡಾಯ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ ;

ಆ) ಇಲ್ಲವಾದಲ್ಲಿ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಪೋಷಕರ ಸಮಿತಿ ನೆರವಿನಿಂದ ಯೋಗ ಮತ್ತು ನೈತಿಕ ಶಿಕ್ಷಣವನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡುವುದೇ?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಠ್ಯ ವಸ್ತುವಿನಲ್ಲಿ ದೈಹಿಕ ಆರೋಗ್ಯ ಹಾಗೂ ಯೋಗ ಶಿಕ್ಷಣ ಒಟ್ಟಿಗೆ ಸೇರಿಸಿ ವೇಳಾಪಟ್ಟಿಯಲ್ಲಿ ಈಗಾಗಲೇ ಅಳವಡಿಸಿದೆ. ನೈತಿಕ ಶಿಕ್ಷಣವನ್ನು ಸಹ 1 ರಿಂದ 10ನೇ ತರಗತಿಯ ಎಲ್ಲಾ ಪಠ್ಯ ಪುಸ್ತಕಗಳಲ್ಲಿ ಅಳವಡಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಗ್ರಾಮ ಪಂಚಾಯ್ತಿ ಆಡಳಿತ ವ್ಯವಸ್ಥೆಯ ಗಣಕೀಕರಣ

323 (540) ಶ್ರೀ ಸಭಾಪತಿ ಯು.ಆರ್. (ಉಡುಪಿ) - ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮ ಪಂಚಾಯ್ತಿಯ ಆಡಳಿತ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಆ) ಸರ್ಕಾರ 'ಇ' ಆಡಳಿತ ಜಾರಿಗೆ ತರುವುದೆಂದು ಘೋಷಿಸಿ 3 ವರ್ಷಗಳಾದರೂ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಗಣಕೀಕರಣ ಮಾಡುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಗ್ರಾಮ ಪಂಚಾಯ್ತಿಗಳನ್ನು ಗಣಕೀಕರಣಗೊಳಿಸುವ ದಿಶೆಯಲ್ಲಿ ಈಗಾಗಲೇ ಟ್ಯಾಪ್ (TAP) ಸಭೆಯನ್ನು ಕರೆದು ಗ್ರಾಮ ಪಂಚಾಯ್ತಿಗಳು ಅಳವಡಿಸಿಕೊಳ್ಳಬೇಕಾದ ಮಾಹಿತಿಗಳ ಬಗ್ಗೆ ಅಂತಿಮ ನಿರ್ಧಾರವನ್ನು ಕೈಗೊಳ್ಳಲಾಗಿದೆ.

ಆ) ಈ ದಿಶೆಯಲ್ಲಿ ಗ್ರಾಮ ಪಂಚಾಯಿತಿಗಳನ್ನು ಗುರುತಿಸಲಾಗಿದ್ದು, ಅಬ್ದುಲ್ ನಜೀರ್‌ಸಾಬ್ ಸಂಸ್ಥೆಯಿಂದ ತರಬೇತಿಯನ್ನು ನೀಡಲು ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ